ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**54**
ಸದಸ್ಯರ ಹೆಸರು	**ಶ್ರೀ ಎಂ.ಎ ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**
ಉತ್ತರಿಸಬೇಕಾದ ದಿನಾಂಕ	**13.12.2021**
ಉತ್ತರಿಸಬೇಕಾದ ಸಚಿವರು	**ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.**
ಪ್ರಶ್ನೆ	**ಉತ್ತರ**
ಅ) ಹಾಸನ ಜಿಲ್ಲೆಯಲ್ಲಿರುವ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಆಧಾರಿತ ಸಂಸ್ಥೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) ಈ ಸಂಸ್ಥೆಗಳಲ್ಲಿ ಸರೋಜಿನಿ ಮಹಿಷಿ ವರದಿಯಂತೆ ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ನೀಡಲಾಗುತ್ತಿದೆಯೇ; ಇಲ್ಲದಿದ್ದಲ್ಲಿ ಸರ್ಕಾರವು ಈ ಸಂಬಂಧ ಕೈಗೊಂಡಿರುವ ಕ್ರಮಗಳೇನು: (ವಿವರ ನೀಡುವುದು)	ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ಉದ್ಯೋಗ ಮಿತ್ರದ ಮಾಹಿತಿಯಂತೆ ಹಾಸನದಲ್ಲಿ ಪ್ರಸ್ತುತ 01 ಮಾಹಿತಿ ತಂತ್ರಜ್ಞಾನ ಕಂಪನಿಯ ಸ್ಥಾಪನೆಗೆ ಏಕಗವಾಕ್ಷಿ ಸಮಿತಿಯ ಮೂಲಕ ಅನುಮೋದನೆ ನೀಡಲಾಗಿದ್ದು, ಸದರಿ ಕಂಪನಿಯು ಕಾರ್ಯರೂಪಕ್ಕೆ ಬಂದಲ್ಲಿ ಸುಮಾರು 36 ಉದ್ಯೋಗಾವಕಾಶಗಳು ಸೃಜನೆಗೊಳ್ಳಲಿವೆ. ಸ್ಥಳೀಯರಿಗೆ ಅವರ ವಿದ್ಯಾರ್ಹತೆ ಮೇಲೆ ಉದ್ಯೋಗ ನೀಡಲಾಗುತ್ತಿದೆ.
ಆ) ಹಾಸನ ನಗರದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಕೇಂದ್ರಗಳನ್ನು ಸ್ಥಾಪನೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ; ಉದ್ದೇಶಿಸಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಈ ಕೇಂದ್ರಗಳನ್ನು ತೆರೆಯಲಾಗುವುದು; (ವಿವರ ನೀಡುವುದು)	ಪ್ರಸ್ತುತ ಹಾಸನವೂ ಸೇರಿದಂತೆ ರಾಜ್ಯದ ಯಾವುದೇ ಪ್ರದೇಶಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಕೇಂದ್ರಗಳನ್ನು ಸ್ಥಾಪನೆ ಮಾಡುವ ಉದ್ದೇಶ ಇರುವುದಿಲ್ಲ.
ಇ) ಬೆಂಗಳೂರು ನಗರ ಹೊರತುಪಡಿಸಿ ರಾಜ್ಯದ ಇತರೆ ಭಾಗಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ಕೇಂದ್ರಗಳನ್ನು ಸ್ಥಾಪನೆ ಮಾಡಲು ಖಾಸಗಿ ಕಂಪನಿಗಳಿಗೆ ಸರ್ಕಾರವು ಒದಗಿಸುತ್ತಿರುವ ಸವಲಗತ್ತುಗಳೇನು? (ವಿವರ ನೀಡುವುದು)	ಬೆಂಗಳೂರು ನಗರ ಹೊರತುಪಡಿಸಿ, ರಾಜ್ಯದ ಇತರೆ ಭಾಗಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕೇಂದ್ರಗಳನ್ನು ಸ್ಥಾಪನೆ ಮಾಡಲು ಸರ್ಕಾರವು ಈ ಕೆಳಕಂಡ ಸವಲತ್ತುಗಳನ್ನು ಒದಗಿಸುತ್ತಿದೆ. • ರಾಜ್ಯದಲ್ಲಿ ಐಟಿ ಉದ್ಯಮವನ್ನು ಅಭಿವೃದ್ಧಿ ಪಡಿಸಲು ಮತ್ತು ನಾವೀನ್ಯತೆಯನ್ನು ಸಮಗ್ರವಾಗಿ ಹೆಚ್ಚಿಸಲು ಮತ್ತು ಹೊಸ ಪ್ರದೇಶದಲ್ಲಿನ ಪರಿಸರ ವ್ಯವಸ್ಥೆಗಳನ್ನು ಬಲಪಡಿಸಲು ಕ್ರಮಕೈಗೊಳ್ಳಲಾಗುವುದು.

	• ಮಾಹಿತಿ ತಂತ್ರಜ್ಞಾನ ಉದ್ಯಮಕ್ಕೆ ಅಗತ್ಯವಿರುವ ಕಾರ್ಮಿಕ ಬಲವನ್ನು ಸಕ್ರಿಯಗೊಳಿಸಲು ಅಗತ್ಯವಾದ ದತ್ತಾಂಶ ಸಂರಕ್ಷಣೆ, ಸುರಕ್ಷತೆಗಳನ್ನು ಬಳಸಿಕೊಳ್ಳಲು ಮತ್ತು ಸುರಕ್ಷಿತ ಮತ್ತು ಸ್ಥಿತಿಸ್ಥಾಪಕ ಪರಿಸರ ವ್ಯವಸ್ಥೆಯನ್ನು ರಚಿಸಲು ಮತ್ತು ಉಳಿಸಿಕೊಳ್ಳಲು ರಾಜ್ಯ ಸೈಬರ್ ಭದ್ರತಾ ನೀತಿಯನ್ನು ರೂಪಿಸಲು ಹೊಸ ನೀತಿಯು ಪೂರಕವಾಗಿದೆ. • ಬೆಂಗಳೂರನ್ನು ಹೊರತುಪಡಿಸಿ ರಾಜ್ಯದೆಲ್ಲೆಡೆ ಮೂಲಸೌಕರ್ಯಾಭಿವೃದ್ಧಿ, ಸ್ಥಳೀಯ ಉದ್ಯಮಕ್ಕೆ ಪ್ರಚೋದನೆ/ ಪ್ರೋತ್ಸಾಹನೀಡಲು ಉತ್ತೇಜಿಸಲಾಗುವುದು. • ಮಾಹಿತಿ ತಂತ್ರಜ್ಞಾನ ಹಾಗೂ ಮಾಹಿತಿ ತಂತ್ರಜ್ಞಾನೇತರ ವಲಯದಲ್ಲಿ ಮಾರುಕಟ್ಟೆ ಅಭಿವೃದ್ಧಿ, ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ವಿವಿಧ ಪ್ರೋತ್ಸಾಹಕಗಳು, ರಿಯಾಯಿತಿ ಮತ್ತು ವಿನಾಯಿತಿಗಳನ್ನು ಪಾರದರ್ಶಕ ರೀತಿಯಲ್ಲಿ ಒದಗಿಸಲಾಗುವುದು. • ಐಪಿ ಸೃಜನೆ ಮತ್ತು ಪೂರಕ ಪರಿಸರ ವ್ಯವಸ್ಥೆಯ ವರ್ಧನೆಗೆ ಬೆಂಬಲ ನೀಡುವ ಮೂಲಕ ಮುಂಬರುವ ಉದ್ಯಮಗಳ ಬೆಳವಣಿಗೆಯನ್ನು ಉತ್ತೇಜಿಸುವುದಕ್ಕಾಗಿ ಸದರಿ ಉದ್ಯಮಕ್ಕೆ ನಾವೀನ್ಯತೆಯನ್ನು ಪ್ರೋತ್ಸಾಹಿಸಲಾಗುವುದು. • ಪ್ರಸ್ತುತ ಜಾರಿಯಲ್ಲಿರುವ ಉಪಕ್ರಮಗಳನ್ನು ಬಲಪಡಿಸುವ ಮೂಲಕ ಮತ್ತು ಉದಯೋನ್ಮುಖ ತಾಂತ್ರಿಕತೆಯನ್ನು ಉತ್ತೇಜಿಸುವ ಹಾಗೂ ಕೌಶಲ್ಯ ಹೂಡಿಕೆಗಳನ್ನು ಪರಿಚಯಿಸುವ ಮೂಲಕ ಕೌಶಲ್ಯ ವರ್ಧನೆಯನ್ನು ಹಾಗೂ ಪ್ರತಿಭೆಗಳನ್ನು ಪೋಷಿಸಲಾಗುವುದು. • ಮಾಹಿತಿ ತಂತ್ರಜ್ಞಾನ ಹಾಗೂ ಮಾಹಿತಿ ತಂತ್ರಜ್ಞಾನೇತರ ಉದ್ಯಮಗಳ ವ್ಯವಹಾರಗಳ ಸುಗಮತೆಯ ಉನ್ನತೀಕರಣಕ್ಕಾಗಿ ಸದರಿ ಉದ್ಯಮ/ ಸಂಸ್ಥೆಗಳಿಗೆ ಸೌಕರ್ಯ ಕಲ್ಪಿಸಿ ಪ್ರೋತ್ಸಾಹಕ ಮತ್ತು ಇತರೆ ಕಾರ್ಯನೀತಿಗಳ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಬಂಡವಾಳ ಹೂಡಿಕೆಯನ್ನು ಆಕರ್ಷಿಸಿ, ಬೆಳವಣಿಯನ್ನು ಸಾಧಿಸಲು ಪೂರಕ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗುವುದು. • ವಲಯ 3ರ ಹೊರಗೆ ಸ್ಥಾಪಿಸಲಾಗಿರುವ ಐಟಿ ಹಬ್‌ಗಳು / ಕ್ಲಸ್ಟರ್‌ಗಳಿಗೆ ಸ್ಥಿರ ಹೂಡಿಕೆಗಳ ಶೇಕಡಾ 20ರವರೆಗೆ ಹಾಗೂ ರೂ.3.00 ಕೋಟಿಗಳ ಪರಿಮಿತಿಗೊಳಪಟ್ಟು ಇವೆರಡರಲ್ಲಿ ಯಾವುದು ಕಡಿಮೆಯೋ ಅಷ್ಟು ಆರ್ಥಿಕ ಬೆಂಬಲವನ್ನು ಕಲ್ಪಿಸಲಾಗುವುದು. • ವಲಯ 3ರ ಹೊರಗೆ ತಮ್ಮ ಉದ್ದಿಮೆಗಳನ್ನು ಸ್ಥಾಪಿಸಲು ಯೋಜಿಸುತ್ತಿರುವ ಅರ್ಹ ಐಟಿ/ಐಟಿಎಸ್ ಸಂಸ್ಥೆಗಳಿಗೆ ಗುತ್ತಿಗೆ/ಬಾಡಿಗೆ ವೆಚ್ಚದ ಮರುಪಾವತಿ ಮಾಡಲಾಗುವುದು. • ಐಟಿ/ಐಟಿಎಸ್ ಸಂಸ್ಥೆಗಳಿಗೆ ಮುದ್ರಾಂಕ ಶುಲ್ಕ/ ವಿದ್ಯುತ್‌ಚ್ಛಕ್ತಿ ದರದಲ್ಲಿ ವಿನಾಯಿತಿ/ ರಿಯಾಯಿತಿ ಒದಗಿಸಲಾಗುವುದು.

	ಜೈವಿಕ ತಂತ್ರಜ್ಞಾನ ವಲಯಕ್ಕಾಗಿ ಸರ್ಕಾರವು ಪ್ರಕಟಿಸಿರುವ ಜೈವಿಕ ತಂತ್ರಜ್ಞಾನ ನೀತಿ 3.0ರಲ್ಲಿ ರಾಜ್ಯದಾದ್ಯಂತ ಸ್ಥಾಪಿಸುವ ಜೈವಿಕ ತಂತ್ರಜ್ಞಾನ ಕಂಪನಿಗಳಿಗೆ ಈ ಕೆಳಕಂಡ ಹಣಕಾಸಿನ ಪ್ರೋತ್ಸಾಹಕಗಳು ಹಾಗೂ ರಿಯಾಯಿತಿಗಳನ್ನು ಒದಗಿಸಲಾಗುವುದು:- • ಉಪಘಟಕಕ್ಕೆ ಸಬ್ಸಿಡಿ. • ರೂ.1ಲಕ್ಷದವರೆಗೆ ಯೋಜನೆಯ ಕಾರ್ಯ ಯೋಜನೆ ತಯಾರಿಕೆಯ ವೆಚ್ಚದ ಮರುಪಾವತಿ. • ಸಂಶೋಧನಾಭಿವೃದ್ಧಿ ಘಟಕಗಳಿಗೆ ವಿದ್ಯುತ್ ದರಗಳಲ್ಲಿ ರಿಯಾಯಿತಿ. • ತಂತ್ರಜ್ಞಾನ ಉನ್ನತೀಕರಣಕ್ಕಾಗಿ ಪಡೆದುಕೊಂಡ ಗರಿಷ್ಟ ರೂ.50.00 ಲಕ್ಷಗಳವರೆಗಿನ ಸಾಲದ ಬಡ್ಡಿಯಲ್ಲಿ ಸಬ್ಸಿಡಿ. • ISO/BIS/NABL/GMP/GLP ಪ್ರಮಾಣೀಕರಣಗಳನ್ನು ಪಡೆಯಲು ಆರ್ಥಿಕ ಸಹಾಯ. • ಭಾರತದಲ್ಲಿ ಮತ್ತು ವಿದೇಶದಲ್ಲಿ ಪೇಟೆಂಟ್ ನೋಂದಣಿಗಾಗಿ ಆರ್ಥಿಕ ಸಹಾಯ. • ಅಂತರಾಷ್ಟ್ರೀಯ ಮಾರ್ಕೆಟಿಂಗ್ ಪ್ರಚುರ ಕಾರ್ಯಕೈಗೊಳ್ಳಲು ಮಾರ್ಕೆಟಿಂಗ್ ಪ್ರೋತ್ಸಾಹಕ.

(ಐಟಿಬಿಟಿ 100 ಎಲ್‌ಸಿಎಂ 2021)

(ಡಾ|| ಸಿ.ಎನ್. ಅಶ್ವಥ್ ನಾರಾಯಣ)

ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.